

ಮಾಡುತ್ತಿದೆ. ನೀರಿಕ್ಷಿತ ಫಲ ಸಿಗುತ್ತಿಲ್ಲ. ವನಮಹೋತ್ಸವಕ್ಕಾಗಿ ಪ್ರತಿವರ್ಷ ಗಿಡ ನೆಟ್ಟ ಜಾಗದಲ್ಲಿ ಗಿಡ ನೆಡಲಾಗುತ್ತಿದೆ ಎನ್ನುವುದು ವಾಸ್ತವ ಸಂಗತಿ. ಶುದ್ಧ ಆಮ್ಲಜನಕ ಸಿಗಲು ಒಬ್ಬ ಮನುಷ್ಯನಿಗೆ ಏಳು ಮರಗಳು ಉತ್ಪಾದಿಸುವಷ್ಟು ಆಮ್ಲಜನಕ ಬೇಕು ಎಂದು ಪರಿಸರ ವಿಜ್ಞಾನಿಗಳು ಅಭಿಪ್ರಾಯ ಪಡುತ್ತಾರೆ. ರಸ್ತೆಗಾಗಿ ಬೆಟ್ಟ ಗುಡ್ಡಗಳು ಮತ್ತು ಅಲ್ಲಿರುವ ಮರಗಳ ಕಡಿಯುವ ಪ್ರಮಾಣ ಲೆಕ್ಕ ಹಾಕಿದರೆ ಆಮ್ಲಜನಕದ ಕೊರತೆ ಕಾಡುತ್ತದೆ. 1-2ದಶಕಗಳ ಹಿಂದೆ ನೀರಿನ ಬಾಟಲು ಹೊತ್ತು ತಿರುಗಾಡುವ, ಹಾಲಿಗಿಂತ ನೀರಿಗೆ ಹೆಚ್ಚು ಬೆಲೆ ತೆರುವ ಪರಿಸ್ಥಿತಿ ಬರುತ್ತದೆ ಎಂದು ಯಾರೂ ಊಹಿಸಿರಲಿಲ್ಲ. ಮುಂದೊಂದು ದಿನ ಉಸಿರಾಡಲು ಆಮ್ಲಜನಕ ಸಿಲಿಂಡರ್ ಹೊತ್ತುಕೊಂಡು ತಿರುಗಾಡಬೇಕಾಗಬಹುದೇನೋ ಎನ್ನುವ ಭಯ ಕಾಡುತ್ತಿದೆ. ಇದನ್ನೆಲ್ಲ ತಡೆದು ಮುಂದಿನ ಪೀಳಿಗೆಗೆ ಉತ್ತಮ ಜೀವನ ಕೊಡಲು ಪ್ರಕೃತಿಪೂರಕ ಜೀವನ ನಮ್ಮದಾಗಬೇಕು. ನಗರಗಳ ಉದ್ಯಾನಗಳಲ್ಲಿ, ಖಾಲಿ ಸೈಟುಗಳಲ್ಲಿ, ರಸ್ತೆ ಬದಿ ಎಲ್ಲೆಂದರಲ್ಲಿ ಗಿಡ ಮರಗಳನ್ನು ಬೆಳೆಸಬೇಕಾದ ಅನಿವಾರ್ಯತೆ ಉಂಟಾಗುತ್ತಿದೆ ಎಂದರೆ ಅತಿಶಯೋಕ್ತಿಯಲ್ಲ, ಅದೇ ವಾಸ್ತವ ಸತ್ಯ. ಆದರೆ ಅಪಾರ ಹಣ ಮತ್ತು ಪರಿಶ್ರಮ ಹೂಡಿ, ನಿತ್ಯ ನಿರ್ವಹಣೆ ಮಾಡಲು ಸಮಯದ ಕೊರತೆ ಕಾಡುತ್ತದೆ.ಮರ ಬೆಳೆಸುವ ಮನಸ್ಸಿದ್ದರೂ ಅನುಕೂಲತೆಗಳಿಲ್ಲ, ಸಮಸ್ಯೆಗಳು ಸಾವಿರಾರು ಸಮಾಧಾನ ಮಾತ್ರ ಒಂದೇ ಒಂದು. ಅದೇಂದರೆ ಬೀಜದುಂಡೆ ಮಾಡಿ ಬಯಲಲ್ಲಿ ಬಿಸಾಡುತ್ತ ಸಾಗುವುದು. ಸಾವಿರಾರು ಜನರು ಸರಳವಾಗಿ ಏಕಕಾಲದಲ್ಲಿ ಭಾಗವಹಿಸಬಹುದಾದ ಅತಿ ಕಡಿಮೆ ಪ್ರಮಾಣದ ಹಣ ಖರ್ಚಾಗುವ ಸರಳ ವಿಧಾನವಾಗಿದೆ. ಬೀಜದುಂಡೆ ಮಾಡುವ ವಿಧಾನ ತುಂಬಾ ಸರಳ. ಕಡಿಮೆ ಸಮಯದಲ್ಲಿ ಕಡಿಮೆ ಶ್ರಮದಿಂದ ಸಿದ್ಧಪಡಿಸಬಹುದು. ಉಸಿರು ನೀಡುವ ಹಸಿರು ಬೆಳೆಸಲು ಆಸಕ್ತಿ ಇರುವ ಎಲ್ಲ ವಯಸ್ಸಿನವರು ಸಹಜವಾಗಿ ಭಾಗವಹಿಸುವ ವಿಧಾನ ಎಂದರೆ ಬೀಜದುಂಡೆ ಸಿದ್ಧಪಡಿಸಿ ಬಿಸಾಡಿ ಬರುವುದು.

### ಗಮನಿಸಬೇಕಾದ ಎಚ್ಚರಿಕೆಗಳು

ಸ್ಥಾನೀಯ ಮಣ್ಣನ್ನು ಬಳಸಬೇಕು. ಮಣ್ಣು ಜಿಗಿಯಾಗಿದ್ದರೆ ಜಿಗಿ ಪ್ರಮಾಣ ಕಡಿಮೆ ಮಾಡಲು ಸಾಮಾನ್ಯ ಮಣ್ಣು ಜರಡಿ ಹಿಡಿದು ಅಥವಾ ಅಲ್ಪ ಪ್ರಮಾಣದ ಮರಳು ಬಳಸಬಹುದು. ಒಟ್ಟಿನಲ್ಲಿ ಉಂಡೆ ಮಾಡಲು ಮಣ್ಣು ಹದ ಮಾಡಲು ಬರುವಂತಿರ ಬೇಕು. ದೂರದ ಊರಿಂದ ಮಣ್ಣು ತರಿಸಬಾರದು. ಮಣ್ಣಿನಲ್ಲಿ ಜಿಗಿ ಇಲ್ಲದಿದ್ದಲ್ಲಿ ಅದಕ್ಕೆ ಜಿಗಿ ಇರುವ ಉದಾಹರಣೆ ಕುಂಬಾರರು ಬಳಸುವ ಜೇಡಿಮಣ್ಣು ಅಥವಾ ಹುತ್ತದ ಮಣ್ಣು ಇತ್ಯಾದಿ ಸೋಸಿ ಸೇರಿಸಬೇಕು. ಒಂದು ಬೀಜದುಂಡೆಯಲ್ಲಿ ಒಂದು ಬೀಜ ಇಡಬೇಕು.

- ಸಗಣಿ ನೀರು, ಗೋಮೂತ್ರ ರೂಪದಲ್ಲಿ ಬಳಸುವ ನೀರು ಸಾಕಾಗಬಹುದು. ಮಣ್ಣಿಗೆ ಹೆಚ್ಚಿಗೆ ನೀರು ಸೇರಿಸಬಾರದು. ಹೆಚ್ಚಿನ ತೇವಾಂಶ ಇದ್ದಲ್ಲಿ ಬೀಜ ಬೇಗನೆ ಮೊಳಕೆ ಒಡೆಯುತ್ತದೆ ಮತ್ತು ಉಂಡೆ ಬೇಗ ಒಣಗುವುದಿಲ್ಲ. ಉಂಡೆಗಳನ್ನು ಚೆಂದವಾಗಿ ಕಟ್ಟಬೇಕು. ಇಟ್ಟುಕೊಳ್ಳಲು, ಬಿಸಾಡುವಾಗ ಆನಂದವಾಗುತ್ತದೆ.

## ಬೀಜದುಂಡೆ ಎಂದರೇನು?

ಲಿಂಗ ಮಧ್ಯೇ ಜಗತ್ಸರ್ವಂ ಅರ್ಥಾತ್ ಲಿಂಗದಲ್ಲಿ ಬ್ರಹ್ಮಾಂಡವಡಗಿದೆ ಎಂಬ ಶರಣವಾಣಿಯಂತೆ ಬೀಜ ಮಧ್ಯೇ ಸಸ್ಯಾಂಡಂ ಅರ್ಥಾತ್ ಬೀಜ ಮಧ್ಯೇ ಸಸ್ಯ ಜಗತ್ತು ಅಡಗಿದೆ. ಬೀಜ ರಕ್ಷಿಸಿ, ಬೆಳೆಸಲು ರೂಪಿಸುವ ಮಣ್ಣುಂಡೆಯೇ ಬೀಜದುಂಡೆ. ಬೀಜದುಂಡೆ ಪರಿಕಲ್ಪನೆಗೆ ಪ್ರಕೃತಿಯೇ ಪಾಠಶಾಲೆ. ಹೌದು. ಅಂಗಳದಲ್ಲಿ ಸಹಜವಾಗಿ ಬೆಳೆದ ಸಣ್ಣ ಸಸಿಯನ್ನು ಕಿತ್ತು ನೋಡಿ ಅದರಲ್ಲಿ ಮೇಲ್ಭಾಗದ ಸಸಿಗಿಂತ ಹೆಚ್ಚು ಉದ್ದ ಮತ್ತು ಆಳಕ್ಕೆ ತಾಯಿಬೇರು ಬೆಳೆದಿರುತ್ತದೆ. ಜೊತೆಗೆ ಮರಿ ಬೇರುಗಳ ಮೇಲೆ ಸಾರಜನಕ ಸಂಗ್ರಹಿಸಿಕೊಂಡ ಸಣ್ಣ ಗಂಟುಗಳು ಕಾಣುತ್ತವೆ. ಸಸಿ ತನ್ನ ಉಳಿವಿಗಾಗಿ ಆಹಾರ, ನೀರಿನ ಸೆಲೆ ಹುಡುಕಿಕೊಂಡು ಹೋದ ದೃಶ್ಯ ಕಣ್ಣಿಗೆ ಕಟ್ಟುತ್ತದೆ. ಹಕ್ಕಿಪಕ್ಷಿಗಳು ತಿಂದ ಹಣ್ಣಿನ ಬೀಜ ಮಲದೊಂದಿಗೆ ಮಣ್ಣಿನಲ್ಲಿ ಸೇರುತ್ತವೆ. ಮುಂಗಾರು ಮಳೆ ತಂದ ತಕ್ಷಣ ತಾನಾಗಿ ಚಿಗುರುತ್ತವೆ. ಅದೇ ಪರಿಕಲ್ಪನೆಯ ಕೂಸು ಬೀಜದುಂಡೆ ತಯಾರಿಸುವಿಕೆ ಆಗಿದೆ. ಅಮ್ಮ ಮಾಡಿದ ಉಂಡೆ ಕಂಡಿದ್ದೇವೆ, ತಿಂದಿದ್ದೇವೆ. ಅದೇ ರೀತಿ ಮಣ್ಣುಂಡೆ ಮಾಡಬೇಕು. ನಮಗಾಗಿ ಅಲ್ಲ, ಪ್ರಕೃತಿಗಾಗಿ ಉಂಡೆ ಮಾಡಬೇಕು. ಉಂಡೆ ಮಾಡುವಷ್ಟು ಜಿಗುಟಾದ ಮಣ್ಣಲ್ಲಿ ಒಂದು ಉತ್ತಮ ಬೀಜ ಇಟ್ಟು ಉಂಡೆ ಮಾಡಿ ಒಣಗಿಸಬೇಕು. ಮಳೆಗಾಲದ ಒಂದು ಮಳೆ ಬಂದ ನಂತರ ಸೀಡ್‌ಬಾಲ್ ಜೇಬಲ್ಲಿ ಹಾಕಿಕೊಂಡು ಖಾಲಿ ನಿವೇಶನ, ಬಡಾವಣೆಯ ಉದ್ಯಾನವನಗಳು, ಕೆರೆ ಅಂಗಳ, ಏನೂ ಬೆಳೆಯದ ಬಯಲು ಪ್ರದೇಶ, ಹೊಲದ ಗಡಿಭಾಗ, ರಸ್ತೆಯ ಎರಡೂ ಬದಿಗಳು ಹೀಗೆ ಎಲ್ಲೆಂದರಲ್ಲಿ ಬೀಸಾಡುವುದು. ವಾಕಿಂಗ್, ಪ್ರವಾಸ, ಪಿಕನಿಕ್, ಚಾರಣ, ಬಸ್ ಮತ್ತು ರೈಲಲ್ಲಿ ಕುಳಿತು ಪ್ರವಾಸ ಮಾಡುವಾಗ ದೂರಕ್ಕೆ ಬಿಸಾಡಬಹುದು. ಅಮ್ಮ ಮಾಡಿದ ಉಂಡೆ ತಿಂದುದಕ್ಕಿಂತ ಬೀಜದುಂಡೆ ಬಿಸಾಡುವಲ್ಲಿ ಹೆಚ್ಚಿನ ಮಜಾ ಉಚಿತವಾಗಿ ಸಿಗುತ್ತದೆ.